**<u>ದಿನಾಂಕಃ 18-01-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಆರ್ ಸಿ ಎಸ್ ವಕೀಲರಿಂದಃ</u>**

ಸೋಮನಗೌಡರಿಗೆ ಪದ್ದವ್ವ ಹೆಂಡತಿ ಎಂದರೆ ನಿಜ. ಲಲಿತವ್ವ ಸಹ ಹೆಂಡತಿ ಇರುತ್ತಾಳೆ. ಲಲಿತವ್ವ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸೋಮನಗೌಡ ಮತ್ತು ಪದ್ದವ್ವಗೆ ಪುಟ್ಟನಗೌಡ, ಹನುಮಂತಗೌಡ, ಜಾನನಗೌಡ, ಮಂಜವ್ವ ಮತ್ತು ಸೋಮವ್ವ ಮಕ್ಕಳು ಎಂದರೆ ನಿಜ. ಪುಟ್ಟನಗೌಡ ಮೃತ ಪಟ್ಟಿರುತ್ತಾರೆ ಎಂದರೆ ನಿಜ. ಅವರ ವಾರಸುದಾರರು ಪ್ರತಿವಾದಿ ಸಂಖ್ಯೆ1 ರಿಂದ 3 ಎಂದರೆ ನಿಜ. 5 ನೇ ಪ್ರತಿವಾದಿ ಮೃತ ಪಟ್ಟಿದ್ದು ಅವರ ವಾರಸದಾರರನ್ನು ತಂದಿರುತ್ತೇನೆ ಎಂದರೆ ನಿಜ. ಸೋಮನಗೌಡನಿಗೆ ಮನೆತನದ ಆಸ್ತಿ ದಾವಾ ಅನಸೂಚಿತ ಬ-1 ರಿ.ಸ.ನಂ. 39 10 ಎಕರೆ 39 ಗುಂಟೆ, ದಾವಾ ಅನಸೂಚಿತ ಕ-1 ಗ್ರಾಮ ಪಂಚಾಯಿತಿ ಆಸ್ತಿ 41 ಎಂದರೆ ನಿಜ. ಈ ಎರಡು ಆಸ್ತಿ ಬಿಟ್ಟರೆ ಅವರ ಮನೆತನಕ್ಕೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ನಿಜ. ದಾವಾ ಅನಸೂಚಿತ ಬ ಆಸ್ತಿ ಸಂಖ್ಯೆ 2 ರಿಂದ 4 ಪದ್ದವನ ತವರು ಮನೆಯ ಆಸ್ತಿ ಎಂದರೆ ನಿಜ. ಅವು ಪದ್ದವ್ವನ ತಂದೆಯಿಂದ ಪದ್ದಮ್ಮಗೆ ಬಂದಿರುತ್ತದೆ ಎಂದರೆ ನಿಜ. ಈ ಆಸ್ತಿಗಳಲ್ಲಿ ಸೋಮನಗೌಡನಿಗೆ ಯಾವುದೇ ಹಕ್ಕು ಇಲ್ಲ ಎಂದರೆ ನಿಜ. ಪದ್ದವ್ವ 2 ಮತ್ತು 3 ನೇ ಪ್ರತಿವಾದಿಯ ತಂದೆಗೆ ಮತ್ತು 1 ನೇ ಪ್ರತಿವಾದಿ ಗಂಡ ಖಾತೆ ಮಾಡಿರುತ್ತಾರೆ ಎಂದರೆ ನಿಜ. ದಾವಾ ಅನಸೂಚಿತ ಬ 2 ನೇ ಆಸ್ತಿಯನ್ನು 1 ನೇ ಪ್ರತಿವಾದಿ ಗಂಡ ಪುಟ್ಟನಗೌಡನಿಗೆ ಮೃತ್ಯುಪತ್ರ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ನಿಜ. ಆ ಪ್ರಕಾರ ಆಸ್ತಿಯು ಖಾತೆ ಬದಲಾವಣೆಯಾಗಿ 1 ರಿಂದ 3 ನೇ ಪ್ರತಿವಾದಿ ಸ್ವಾಧೀನ ಮತ್ತು ಅನುಭವ ಇದ್ದಾರೆ ಎಂದರೆ ನಿಜ. ಈ ದಾವೆಯಲ್ಲಿ ಸೋಮನಗೌಡನ ಆಸ್ತಿಯನ್ನು ಸೇರಿಸುವ ಅವಶ್ಯಕತೆ ಇರುವುದಿಲ್ಲ ಎಂದರೆ ನಿಜ. ಅಳಲಗೇರಿಯಲ್ಲಿರುವ ಆಸ್ತಿ ಪುಟ್ಟನಗೌಡಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಏಕೆಂದರೆ ಅವರು ದತ್ತುಕ ಹೋಗಿರುತ್ತಾರೆ. ಅವರು ರುದ್ರಪ್ಪ ಇಟಗಿ ಎಂಬುವವರ ಮನೆಗೆ

ದತ್ತುಕ ಹೋಗಿರುತ್ತಾರೆ. ಈಗ್ಗೆ ಸುಮಾರ 10-12 ವರ್ಷದ ಹಿಂದೆ ದತ್ತಕ ಹೋಗಿರುತ್ತಾರೆ. ಈ ಬಗ್ಗೆ ನಾನು ಯಾವುದೇ ದಾಖಲೇ ನೋಡಿರುವುದಿಲ್ಲ. ದತ್ತಕ ಪತ್ರ ಆಗಿರುವುದಿಲ್ಲ ಅವರು ರುದ್ರಪ್ಪ ಎಂಬುವವರಿಗೆ ದತ್ತಕ ಹೋಗಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಗೆ ತೊಂದರೆ ಆಗುತ್ತದೆ ಎಂದು ಪುಟ್ಟನಗೌಡ ದತ್ತಕ ಹೋಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೋಮನಗೌಡನಿಗೆ ಸಂಬಂಧಿಸಿದ ಅಳಲಗೇರಿ ಆಸ್ತಿಯಲ್ಲಿ ಪುಟ್ಟನಗೌಡನಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ಪುಟ್ಟನಗೌಡನ ವಾರಸುದಾರರಾದ 1 ರಿಂದ 3 ನೇ ಪ್ರತಿವಾದಿಗಳಿಗೆ ಅಳಲಗೇರಿ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಅಳಲಗೇರಿ ಆಸ್ತಿಯನ್ನು ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳಿಗೆ ಅಳಲಗೇರಿ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಲಲಿತವ್ವನ ಮದುವೆ ನಾವು ಚಿಕ್ಕವರಿದ್ದಾಗ ಆಗಿರುತ್ತದೆ. ಈಗ್ಗೆ 6-7 ವರ್ಷದ ಹಿಂದೆ ಪದ್ದವ್ವ ಮೃತಪಟ್ಟಿರುತ್ತಾರೆ. ಸೋಮನಗೌಡ ತೀರಿಕೊಂಡು ಸುಮಾರು 30 ವರ್ಷ ಆಗಿರುತ್ತದೆ. ಲಲಿತವ್ವ ಸೋಮನಗೌಡನನ್ನು ಮದುವೆ ಆಗಿದೆ ಎಂದು ಹೇಳುವ ಕಾಲಕ್ಕೆ ಪದ್ದವ್ವ ಇದ್ದರು. ಲಲಿತವ್ವನನ್ನು ಸೋಮನಗೌಡ ಮದುವೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಅವರಿಬ್ಬರಿಗೆ ವಾದಿ-2, 3 ಮತ್ತು ಶಾಂತವ್ವ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಳಲಗೇರಿ ಆಸ್ತಿಯಲ್ಲಿ ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವಾಗಲಿ ನಮ್ಮ ತಾಯಿಯಾಗಲಿ ಅಳಲಗೇರಿ ಆಸ್ತಿಯನ್ನು ಎಂದೂ ವಹಿವಾಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ರೀತಿ ಹಿಸ್ಸೆ ದಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ಹಲವಾಗಲು ಆಸ್ತಿಯ ಬಗ್ಗೆ ದಾವಾ ಹಾಕುವ ಕಾಲಕ್ಕೆ ನಮಗೆ ಮಾಹಿತಿ ಇಲ್ಲದ ಕಾರಣ ತಪ್ಪಾಗಿ ಸೇರಿಸಿರುತ್ತೇವೆ ಎಂದರೆ ನಿಜ. ನಾವು ಅಳಲಗೇರಿ ಆಸ್ತಿಯಲ್ಲಿ ಮಾತ್ರ ಹಿಸ್ಸೇ

ಕೇಳುತ್ತಿದ್ದೆವೆ. ಹಲವಾಗಲು ಆಸ್ತಿಯು ಪದ್ದವ್ವಗೆ ಸೇರಿದ್ದರಿಂದ ಪ್ರತಿವಾದಿ ನಂ. 4, 5, 6 ಮತ್ತು 7 ರವರಿಗೆ ಹಕ್ಕು ಇರುವುದಿಲ್ಲ ಎಂದರೆ ನಿಜ.

**ಪಾಟೀ ಸವಾಲುಃ 4 ಮತ್ತು 5 ನೇ ಪ್ರತಿವಾದಿಯರ ಪರಃ**

ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**SD/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.